**<u>2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಅಸಲು ದಾವೆ. ಸಂಖ್ಯೆ: 86/2021</u>**

ಪಿ.ಡಬ್ಲ್ಯೂ:01 ಶ್ರೀಮತಿ ಪಾರ್ವತಮ್ಮ

**ಸಾಕ್ಷಿಯನ್ನು ದಿನಾಂಕ: 09-02-2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು. ಸಾಕ್ಷಿಯು ತನಗೆ ತೆಲುಗು ಭಾಷೆ ಬರುತ್ತದೆ ಎಂದು ಹೇಳಿದ್ದು ಉಭಯ ವಕೀಲರ ಸಹಾಯದಿಂದ ಅದನ್ನು ಕನ್ನಡಕ್ಕೆ ಭಾಷಾಂತರಿಸಲಾಯಿತು.**

**<u>ಮುಂದುವರೆದ ಪಾಟೀಸವಾಲು:- ಪ್ರತಿವಾದಿ ಪರ ಶ್ರೀ ಕೆ ಸಿ ಎನ್ ವಕೀಲರಿಂದ</u>**

1. ಸದರಿ ಅನಂತಪದ್ಮನಾಭಯ್ಯ ಶೆಟ್ಟಿ ಮತ್ತು ರತ್ನಮ್ಮ ರವರು ಯಾವ ದಿನಾಂಕದಂದು ಮದುವೆಯಾಗಿರುತ್ತಾರೆಂದು ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು 1965 ನೇ ಸಾಲಿನಲ್ಲಿ ಸದರಿ ಮದುವೆ ಆಗಿದೆ ಎನ್ನುತ್ತಾರೆ. ಸದರಿ ಮದುವೆಗೆ ಸಂಬಂಧಪಟ್ಟಂತೆ ನನ್ನ ಪ್ರಕಾರ ಅದನ್ನು ತೋರಿಸುವ ದಾಖಲೆಗಳು ನನ್ನ ಬಳಿ ಇದೆಯಾ ಎಂದರೆ ಇಲ್ಲ. ನಾನು 1967 ನೇ ಸಾಲಿನಲ್ಲಿ ಜನಿಸಿರುತ್ತೇನೆ. ಸದರಿ ರತ್ನಮ್ಮ ರವರು 1979 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ಮೇಲೆ ಹೇಳಿದಂತೆ ಅನಂತಪದ್ಮನಾಭಯ್ಯ ಶೆಟ್ಟಿ ಮತ್ತು ರತ್ನಮ್ಮ ರವರು ಯಾವತ್ತೂ ಸಹ ಮದುವೆ ಆಗಿಲ್ಲ ಮತ್ತು ಅವರ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

2. ನನಗೆ ಮದುವೆಯಾಗಿ ಸುಮಾರು 40 ವರ್ಷಗಳಾಗಿವೆ. ನನ್ನ ತಂಗಿಯಾದ 2 ನೇ ವಾದಿಗೆ ಮದುವೆಯಾಗಿ ಸುಮಾರು 30 ವರ್ಷಗಳಾಗಿವೆ. ನಾನು ವಾಸ ಮಾಡುವುದು ಮತ್ತು ಬೆಳೆದಿದ್ದು ಆಂಧ್ರ ಪ್ರದೇಶದಲ್ಲಿ ಇರುತ್ತದೆ. ನನ್ನ ಬಳಿ ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ದಾಖಲೆಗಳು ಇರುತ್ತವೆ ಸಾಕ್ಷಿ ಮುಂದುವರೆದು ನನ್ನ ತಂದೆಯವರಾದ ಅನಂತಪದ್ಮನಾಭಯ್ಯ ಶೆಟ್ಟಿ ರವರು ಆಂಧ್ರಪ್ರದೇಶದಿಂದ ಸುಂದರಪಾಳ್ಯಂಗೆ ಬಂದಿರುತ್ತಾರೆ. ನನ್ನ ಪ್ರಕಾರ ನನ್ನ ತಂದೆಯವರು ಸುಮಾರು 18-20 ವರ್ಷಗಳ ಹಿಂದೆ ಆಂಧ್ರಪ್ರದೇಶದಿಂದ ಸುಂದರಪಾಳ್ಯಂಗೆ ಬಂದಿರುತ್ತಾರೆ.

2. ನನಗೆ ಅಣ್ಣಯ್ಯ ಶೆಟ್ಟಿ ರವರು ಗೊತ್ತಿದ್ದು ಅವರ ಹೆಂಡತಿ ಹೆಸರು ಗೊತ್ತಿಲ್ಲ. ಸದರಿ ಅಣ್ಣಯ್ಯ ಶೆಟ್ಟಿ ರವರ ಹೆಂಡತಿಯನ್ನು ನಾನು ನೋಡಿರುವುದಿಲ್ಲ. ಸದರಿ ಅಣ್ಣಯ್ಯ ಶೆಟ್ಟಿ ರವರಿಗೆ 3 ಜನ ಮಕ್ಕಳಿರುತ್ತಾರೆ. ಸದರಿ ರವರ 3 ಮಕ್ಕಳ ಹೆಸರು ಕೃಷ್ಣಯ್ಯ ಶೆಟ್ಟಿ ಶ್ರೀರಾಮ ಶೆಟ್ಟಿ ಮತ್ತು ಅನಂತಪದ್ಮನಾಭಯ್ಯ ಶೆಟ್ಟಿ ಎಂದಾಗಿರುತ್ತದೆ. ಸದರಿ ಮೂರು ಜನ ಕೂಡ ಮರಣ ಹೊಂದಿದ್ದು ಅವರ ಮಕ್ಕಳು ಜೀವಂತ ಇರುತ್ತಾರೆ. ಸದರಿ ಕೃಷ್ಣಯ್ಯ ಶೆಟ್ಟಿ ರವರಿಗೆ ಇಬ್ಬರು ಗಂಡು ಮಕ್ಕಳು, ಒಂದು ಹೆಣ್ಣು ಮಗಳು ಇರುತ್ತಾರೆ. ಸದರಿ ಶ್ರೀರಾಮ ಶೆಟ್ಟಿ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಒಂದು ಗಂಡು ಮಗು ಇರುತ್ತದೆ. ಸದರಿ ಅಣ್ಣಯ್ಯ ಶೆಟ್ಟಿ ರವರಿಗೆ ತುಂಬಾ ಆಸ್ತಿಗಳಿದ್ದವು ಎಂದರೆ ಸರಿ. ಸದರಿ ಆಸ್ತಿಗಳನ್ನು ಅವರು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ಅವರು ವಿಭಾಗವಾದ ನಂತರ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ.

3. ಸದರಿ ನನ್ನ ಪ್ರಕಾರ ವಿಭಾಗವು ನನಗೆ ಸುಮಾರು 4-5 ವರ್ಷ ಇರುವಾಗ ಆಗಿರುತ್ತದೆ. ಸದರಿ ವಿಭಾಗವನ್ನು ತೋರಿಸುವ ವಿಭಾಗ ಪತ್ರವನ್ನು ನಾನು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕೃಷ್ಣಯ್ಯ ಶೆಟ್ಟಿ ಶ್ರೀರಾಮ ಶೆಟ್ಟಿ ಮತ್ತು ಅನಂತಪದ್ಮನಾಭಯ್ಯ ಶೆಟ್ಟಿ ರವರಿಗೆ ನನ್ನ ಪ್ರಕಾರ ವಿಭಾಗ ಆಗಿದ್ದರೆ ಯಾವ ಯಾವ ಆಸ್ತಿಗಳು ಎಷ್ಟು ಎಷ್ಟು ವಿಸ್ತೀರ್ಣದಲ್ಲಿ ಯಾವ ಚೆಕ್ಕುಬಂದಿಯಲ್ಲಿ ಬಂದಿದೆ ಎಂದರೆ ಸಾಕ್ಷಿಯು ಅದು ನನಗೆ ಹೇಳಲಾಗುವುದಿಲ್ಲ ಅದರೆ ಅವರೆಲ್ಲರೂ ಸಮಪಾಲು ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನನ್ನ ಹೆಸರಾಗಲಿ ನನ್ನ ತಂಗಿ ಹೆಸರಾಗಲಿ ಇಲ್ಲ ಎಂದರೆ ಸಾಕ್ಷಿಯು ಹೌದು ನನ್ನ ಚಿಕ್ಕಮ್ಮನಾದ 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದು ಅವರು ಮೋಸದಿಂದ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ದಾವ ಆಸ್ತಿಯ 2 ನೇ ಐಟಂ ನಂ ಸರ್ವೆ ನಂಬರ್ ನನಗೆ ಹೇಳಲಾಗುವುದಿಲ್ಲ ಸಾಕ್ಷಿ ಮುಂದುವರೆದು ದಾಖಲೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನಿಪಿ6 ಕ್ರಯಪತ್ರದಲ್ಲಿ ದಿಃ 9.2.1968 ರಂದು ಅನಂತಪದ್ಮನಾಭಯ್ಯ ಶೆಟ್ಟಿ ರವರು ಐಟಂ ನಂ 2 ಅನ್ನು ಖರೀದಿ ಮಾಡಿರುವ ಬಗ್ಗೆ ನಮೂದು ಇದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ನಿಪಿ6 ರಂತೆ ಅನಂತಪದ್ಮನಾಭಯ್ಯ ಶೆಟ್ಟಿ ರವರೇ ಸದರಿ ಐಟಂ ನಂ 2 ಅನ್ನು ದಿಃ 24.1.2007 ರಂದು 4 ನೇ ಪ್ರತಿವಾದಿಗೆ ವಿಸ್ತೀರ್ಣ 20 ಗುಂಟೆಯನ್ನು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ಹೌದು ಮೋಸ ಮಾಡಿ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ.

4. ಸದರಿ ನಿಪಿ6 ದಾಖಲೆಯು 2007 ನೇ ಸಾಲಿನಲ್ಲಿ ಆಗಿದ್ದು ಸದರಿ ಅನಂತಪದ್ಮನಾಭಯ್ಯ ಶೆಟ್ಟಿ ರವರ ಜೀವಿತ ಕಾಲದಲ್ಲಿ ಹಾಗೂ ಈ ದಾವೆಯನ್ನು ಹೂಡುವ ಮೊದಲು ಯಾವ ಕಾರಣಕ್ಕಾಗಿ ಅದನ್ನು ನಾನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ಸದರಿ ಆಸ್ತಿಯನ್ನು ನಂತರ 5 ನೇ ಪ್ರತಿವಾದಿಯು 4 ನೇ ಪ್ರತಿವಾದಿಯಿಂದ ದಿಃ 4.3.2015 ರಂದು ನಿಪಿ7 ರಂತೆ ಖರೀದಿ ಮಾಡಿರುತ್ತಾರೆಂದರೆ ಸರಿ. ದಿಃ 24.1.2007 ರಂದು 5 ನೇ ಪ್ರತಿವಾದಿಯು 12 ಗುಂಟೆಯನ್ನು ಶ್ರೀನಿವಾಸ್ ರವರಿಂದ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಅದಕ್ಕೂ ನನಗೂ ಸಂಬಂಧ ಇಲ್ಲ ಎನ್ನುತ್ತಾರೆ. ಸದರಿ ಅನಂತಪದ್ಮನಾಭಯ್ಯ ಶೆಟ್ಟಿ ರವರ ಹೆಸರಿನಲ್ಲಿ ಬೇರೆ ಬೇರೆ ಆಸ್ತಿಗಳಿತ್ತು ಎಂದರೆ ಸರಿಯಲ್ಲ. ಸದರಿ ಅನಂತಪದ್ಮನಾಭಯ್ಯ ಶೆಟ್ಟಿ ರವರು ಅವರ ಹೆಸರಿನಲ್ಲಿದ್ದ ಬೇರೆ ಬೇರೆ ಆಸ್ತಿಗಳ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನನಗೂ ಮತ್ತು 1 ರಿಂದ 3 ನೇ ಪ್ರತಿವಾದಿಗೂ ವಿರೋಧ ಇದೆ ಎಂದರೆ ಹೌದು. ನಾನು ಅನಂತಪದ್ಮನಾಭಯ್ಯ ಶೆಟ್ಟಿ ರವರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ನನಗೂ ದಾವ ಆಸ್ತಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

5. ಈಗ ದಾವ ಆಸ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಬಂದಿದೆ ಎಂದರೆ ಸರಿ. ಈಗ ದಾವ ಆಸ್ತಿಗಳ ಮಾರುಕಟ್ಟೆ ಬೆಲೆ ಹೆದ್ದಾರಿ ಬಂದ ಕಾರಣ ಜಾಸ್ತಿಯಾಗಿದೆ ಎಂದರೆ ಸರಿ. ಸದರಿ ಅನಂತಪದ್ಮನಾಭಯ್ಯ ಶೆಟ್ಟಿ ರವರು ಸ್ವಯಾರ್ಜಿತವಾಗಿ ಆಸ್ತಿಗಳನ್ನು ಖರೀದಿ ಮಾಡಿದ್ದು ತಮ್ಮ ಆರೋಗ್ಯ ಸಮಸ್ಯೆ ಯಿಂದ ಅದರಲ್ಲಿ 20 ಗುಂಟೆಯನ್ನು ಅವರೇ ಸ್ವತಃ ಮಾರಾಟ ಮಾಡಿದ್ದು ಈಗ ಅದರಲ್ಲಿ ಹಕ್ಕು ಕೇಳುವ ಅಧಿಕಾರ ನನಗಾಗಲಿ ಅಥವಾ ಇತರ ವಾದಿಗಾಗಲಿ ಇಲ್ಲ ಎಂದರೆ ಸರಿಯಲ್ಲ. ನಾನು 5 ನೇ

ಪ್ರತಿವಾದಿಯ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಪ್ರಮಾಣಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**Sd/-**

**ಸಿ/ಸಿ 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**